ಶಿವಮೊಗ್ಗ ಡಿಸ್ಟ್ರಿಕ್ಟ್.

ಫಾರೆಸ್ಟ್ ಇಲಾಖಾ.

ತಾರೀಖು 19ನೇ ಜನವರೀ 1887ನೇ ಇಸವಿ.

ಸ್ ೧೮೭೮ನೇ ಇಸವಿ ಜೂ 8ನೇ ಮರ್ಕುಮಿನ ಫಾರೆಸ್ಟ್ ರೂಲ್ಸಿನ 13ನೇ ನಿಬಂಧನೆಗಳನುಸರಿಸಿ ಇದರಡೀ ನಮೂದಾದ ಸರಕಾರಿ ಜಂಗ್ಲಿಗಳನ್ನು ಮತ್ತು ಪ್ಲಾಂಟೇರ್ಷಗಳನ್ನು ಸ್ ೧೮೮೭ನೇ ಇಸವಿ ಫಿಬ್ರವರೀ ಗುರ್ರೇ ಲಾಗಾಯತು 1887ನೇ ಇಸವಿ ಮೇ ಆಖೈರ್ ತಾರೀಖು ವರಿಗೆ ಬ್ಯಾಟೆಗಾರರುಗಳಿಗೂ ಇತರ ಜನಗಳಿಗೂ ಬಂದು ಮಾಡಲ್ಪಟ್ಟು ಯಿವೆ.

ಫಾರೆಸ್ಟು.	ಪ್ಲಾಂಟೇರ್ಷ್ [illegible]	ತಾಲ್ಲೂಕು.
ಲಕ್ಕುವಳ್ಳಿ ಸ್ಟೇಟ್ ಫಾರೆಸ್ಟ್	ಲಕ್ಕುವಳ್ಳಿ ಟೀಕ್ ಪ್ಲಾಂಟೇರ್ಷ.	ತರಿಕೆರೆ ತಾಲ್ಲೂಕು.
ಸಖ್ಕರೆಬೈಲು ಡಿಟೋ	ಸಖ್ಕರೆ ಬೈಲ್ ಟೀಕ್ ಪ್ಲಾಂಟೇರ್ಷ	ಶಿವಮೊಗ್ಗ ಡಿಟೋ.
ಕೆಂಕರಗುಡ್ಡ ಡಿಟೋ	ಆಲಕೊಳ ಸಂದಲ್ ಪ್ಲಾಂಟೇರ್ಷ	ಡಿಟೋ ಡಿಟೋ.
ಭೂತನಬೈಲು ಡಿಟೋ	ಡಿಟೋ	ಡಿಟೋ
	ಅನಪೆನಕಟ್ಟೆ ಸಂದ್ಲು ಪ್ಲಾಂಟೇರ್ಷ	ಡಿಟೋ
	ಹೆಬ್ಬೆ ಟೀಕ್ ಪ್ಲಾಂಟೇರ್ಷ	ಕೊಪ್ಪ ತಾಲ್ಲೂಕು.

ಇ. ಪಿ, ಲೌರಿ,
ಅಸಿಸ್ಟೆಂಟ್ ಕಂಸರ್ವೇಟರ್ ಫಾರೆಸ್ಟ್ಸ್.

ನಗರ ಡಿವೀರ್ಜ್.

ನಗರ ಡಿವೀರ್ಜ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 2.

ಮೃತಪಟ್ಟ ಲಕ್ಷ್ಮೀಶ್ವರದ ಚಂದಪ್ಪನ ಆಸ್ತಿ ವಿಷಯದಲ್ಲಿ.—

ಅರ್ಜೀದಾರಳು ರುದ್ರವ್ವ, ಮೃತಪಟ್ಟ ಸದರೀ ಲಕ್ಷ್ಮೀಶ್ವರದ ಚಂದ್ರಪ್ಪನಿಗೆ ಹೆಂಡತಿಯು ಆಗಬೇಕೆಂಬ ಹಕ್ಕುದಾರೀ ಮೇಲೆ ಶಿವಮೊಗ್ಗಾಸ್ಥಳದ ರುದ್ರವ್ವನು ಶಿವಮೊಗ್ಗಾ ವಾಸಸ್ಥನಾಗಿ ಮೃತಪಟ್ಟ ಲಕ್ಷ್ಮೀಶ್ವರದ ಚಂದಪ್ಪನ ಜಿಂದಗೀ ಬಗ್ಯಾಗಿ ಬರತಕ್ಕ 8000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ರುದ್ರವ್ವನ ಅರ್ಜೀಯನ್ನು 1887ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 19ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯೆನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಕ್ಷ್ಮೀಶ್ವರದ ಚಂದಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜನವರೀ ತಿಂಗಳು 22ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೇ ಕೊಡೋಣವಾಗಿದೆ.

1887ನೇ ಇಸವಿ ಅರ್ಜೀ ನಂಬರ್ 10.

ಮೃತಪಟ್ಟ ಶ್ರೀನಿವಾಸಾಚಾರಿಯ ಆಸ್ತಿ ವಿಷಯದಲ್ಲಿ.—

ಅರ್ಜೀದಾರ ಕಟ್ಟೇ ಕಾವಾಚಾರಿ ಮೃತಪಟ್ಟ ಸದರೀ ಶ್ರೀನಿವಾಸಾಚಾರಿಗೆ ಮಾವನು ಆಗಬೇಕೆಂಬ ಹಕ್ಕುದಾರೀ ಮೇಲೆ ತೀರ್ಥಹಳ್ಳಿ ತಾಲ್ಲೂಕು ಬಾಳಗಾರದಲ್ಲಿರುವ ಕಟ್ಟೆ ಕಾವಾಚಾರಿಯು ಶಿಕಾರಿಪುರದ ವಾಸಸ್ಥನಾಗಿ ತೀರ್ಥಹಳ್ಳಿ ತಾಲ್ಲೂಕ್ಕುಮುಳಬಾಗಲ್ ಗ್ರಾಮದಲ್ಲಿ ಮೃತಪಟ್ಟ ಶ್ರೀನಿವಾಸಾಚಾರಿಯ ಜಿಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲವನ್ನು ಅರ್ಜೀದಾರನ ಮಗಳು ಮತ್ತು ಮೃತಪಟ್ಟ ಶ್ರೀನಿವಾಸಾಚಾರಿಯ ಹೆಂಡತಿ ವೈನರ್ ವೆಂಕಟಲಕ್ಷ್ಮಕ್ಕನಿಗೋಸ್ಕರ ವಸೂಲು ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಕಾಯಿಷ್ ಮಾಡಿರುತ್ತಾನೆ.